ದಿನಾಂಕ 25-03-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಜಿಲ್ಲಾ ಸರ್ಕಾರಿ ವಕೀಲರಿಂದ ಃ**

ನಾನು ನನ್ನ ಮುಖ್ಯ ವಿಚಾರಣೆಗೆಂದು ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ-**

ಪಾವಗಡ ತಾಲ್ಲೂಕಿನಲ್ಲಿ ಅಳವಡಿಸಿರುವ ಸೌರವಿದ್ಯುತ್ ಘಟಕ ಪ್ರಪಂಚದಲ್ಲಿಯೇ 3 ನೇ ಅತೀ ದೊಡ್ಡ ಸೌರವಿದ್ಯುತ್ ಘಟಕ ಎಂದರೆ ಸರಿ. ನಾಗಲಾಪುರ, ಪಳವಳ್ಳಿ , ಕೆಂಚಗಾನಹಳ್ಳಿ , ಹನುಮನಬೆಟ್ಟ , ಚಿಕ್ಕಹಳ್ಳಿ ಇವುಗಳು ಸೋಲಾರ್ ಘಟಕಕ್ಕೆ ಅಳವಡಿಸಿರುವ ಹಳ್ಳಿಯ ಅಕ್ಕಪಕ್ಕದ ಗ್ರಾಮಗಳು ಎಂದರೆ ಸರಿ. ಈ ಮೇಲೆ ಹೇಳಿದ ಹಳ್ಳಿಗಳ ಪ್ರದೇಶ ಒಂದೇ ಆಗಿದೆ ಎಂದರೆ ಸರಿ. ಸೋಲಾರ್ ಘಟಕದ ಅಕ್ಕಪಕ್ಕದ ಗ್ರಾಮಗಳ ಜಮೀನಿನ ಮೌಲ್ಯ ಹೆಚ್ಚು ಇದೆ ಎಂದರೆ ಸರಿ. ಅರ್ಜಿದಾರರ ಜಮೀನಿನ ಪಕ್ಕದಲ್ಲಿಯೇ ಸೋಲಾರ ಘಟಕ ಅಳವಡಿಸಿದ್ದಾರೆ ಎಂದರೆ ಸರಿ. ಅರ್ಜಿದಾರರ ಜಮೀನಿನ ಮಧ್ಯಭಾಗದಲ್ಲಿಯೇ ರೈಲ್ವೇ ಹಳಿಯನ್ನು ಹಾಕಿದ್ದಾರೆ ಎಂದರೆ ಸರಿ. ಆ ಜಮೀನಿನಲ್ಲಿ ಹಾಕಿರುವ ರೈಲ್ವೇ ಹಳಿ ಸುಮಾರು 8 ಅಡಿ ಎತ್ತರದಲ್ಲಿ ಇದೆ ಎಂದರೆ ಸರಿ. ಆ ಜಮೀನಿನ ಬಳಿ ಸೇತುವೆಯನ್ನು ಮಾಡಿಲ್ಲ ಎಂದರೆ ಸರಿ. ರೈಲ್ವೇ ಲೈನನ್ನು ಹಾಕಿರುವುದರಿಂದ ಆ ಜಮೀನಿನ ಮೂಲ ಬಲೆ ಕಡಿಮೆ ಆಗಿದೆ ಎಂದರೆ ನನಗೆ ಹೇಳಲು ಆಗುವುದಿಲ್ಲ. ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಒಂದು ಗುಂಟೆ ಜಮೀನು ಎರಡು ಲಕ್ಷ ರೂ.ಬೆಲೆ ಬಾಳುತ್ತಿತ್ತು ಎಂದರೆ ಗೊತ್ತಿಲ್ಲ. ಚಿಕ್ಕಹಳ್ಳಿ ಗ್ರಾಮದಲ್ಲಿ ತುಮಕೂರು-ಬಳ್ಳಾರಿ ರಾಷ್ಟ್ರೀಯ ಹೆದ್ದಾರಿ ಹೋಗುತ್ತದೆ ಎಂದರೆ ಸರಿಯಲ್ಲ. ರಾಜ್ಯ ಹೆದ್ದಾರಿ ರಸ್ತೆ ಹೋಗುತ್ತದೆ. ರಾಜ್ಯ ಹೆದ್ದಾರಿ ರಸ್ತೆಗೆ ಅರ್ಜಿದಾರರ ಜಮೀನು

ಹೊಂದಿಕೊಂಡಿದೆ ಎಂದರೆ ಇರಬಹುದು. ಚಿಕ್ಕಹಳ್ಳಿ ಸ.ನಂಬರ್ ನಲ್ಲಿ ರೈಲ್ವೇ ಸ್ಟೇಷನ್ ಕಟ್ಟಿದ್ದೇವೆ ಎಂದರೆ ಸರಿಯಲ್ಲ , ಹನುಮನಬೆಟ್ಟದಲ್ಲಿ ರೈಲ್ವೇ ಸ್ಟೇಷನ್ ನ್ನು ನಿರ್ಮಾಣ ಮಾಡಿದ್ದೇವೆ. ದೊಡ್ಡಹಳ್ಳಿ-ಹನುಮನಬೆಟ್ಟದ ನಡುವೆ ರೈಲ್ವೇ ಸ್ಟೇಷನ್ ಇದೆ ಎಂದರೆ ಸರಿ. ಜಮೀನಿನ ಬೆಲೆ ಪ್ರತಿ ವರ್ಷ ಶೇ. 20 ರಷ್ಟು ಹೆಚ್ಚಾಗುತ್ತಿದೆ ಎಂದರೆ ನನಗೆ ಗೊತ್ತಿಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸಾ ಸ ಇ ಎ ಒ

1 ನೇ ಅಧಿಕ ಜಿಲ್ಲಾ ನ್ಯಾಯಾಧೀಶರು,
ತುಮಕೂರು.